**SRUJANI** ISSN: 2583-3510
**Indian Journal of Innovative Research and Development (SIJIRD)**
Volume-1 (02), May-June 2022, Pp. 60-64
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ದೇವದಾಸಿಯರ ಬದುಕಿನ ಸ್ಥಿತ್ಯಂತರ: ಒಂದು ಅಧ್ಯಯನ

**ಅಂಜಿನಪ್ಪ ಗಡಾದ***
*ಸಂಶೋಧಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***
ದೇವದಾಸಿಯರು ಪ್ರಾರಂಭದಲ್ಲಿ ದೇವರು ಮತ್ತು ದೇವಾಲಯಕ್ಕೆ ಸೀಮಿತವಾಗಿದ್ದರು. ದೇವಾಲಯದಲ್ಲಿ ನಡೆಯುವ ಪೂಜಾಕಾರ್ಯಕ್ಕೆ ಬೇಕಾದ ವಸ್ತುಗಳನ್ನು ನೀಡಿ ನೈವೇದ್ಯ ಪಡೆದುಕೊಳ್ಳುವುದು ಸಾಮಾನ್ಯವಾಗಿದೆ. ಪ್ರತಿವರ್ಷ ಕೃಷಿಕರು ದೇವದಾಸಿಯರಿಗೆ ದವಸ–ಧಾನ್ಯಗಳನ್ನು ಮೀಸಲಿಡುತ್ತಿದ್ದರು. ದೇವಾಲಯದಲ್ಲಿ ಸಿಗುವ ನೈವೇದ್ಯ ಮತ್ತು ಕೃಷಿಕರು ನೀಡುತ್ತಿದ್ದ ದವಸಧಾನ್ಯಗಳನ್ನು ಸ್ವೀಕರಿಸಿಕೊಂಡು ಜೀವನ ನಡೆಸುತ್ತಿದ್ದರು. ಕಾಲಂತರದಲ್ಲಿ ದೇವಾಲಯದಲ್ಲಿರುವ ಪೂಜಾರಿ ಮತ್ತು ಊರಿನ ಮುಖಂಡರು ದೇವರ ಹೆಸರಿನಲ್ಲಿ ದೇವದಾಸಿಯರನ್ನು ದೈಹಿಕವಾಗಿ ಬಳಸಿಕೊಳ್ಳುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ದೇವದಾಸಿಯರ ಬದುಕು ಅತಂತ್ರ ಸ್ಥಿತಿಯಲ್ಲಿದೆ.

***Key Words:*** ದೇವದಾಸಿ, ಸ್ಥಿತ್ಯಂತರ, ಶೋಷಣೆ, ಶಿಕ್ಷಣ, ಮಾಶಾಸನ.

**ಪೀಠಿಕೆ**

ದೇವದಾಸಿ ಎಂಬ ಪದವು ಸಂಸ್ಕೃತ ಪದವಾಗಿದ್ದು–ಶಾಶ್ವತವಾಗಿ ತನ್ನನ್ನು ತಾನು ದೇವರ ಸೇವೆಗೆ ಅರ್ಪಿಸಿಕೊಳ್ಳುವುದಾಗಿದೆ. ಬಾಲಕಿಯರು ಪ್ರೌಢಾವಸ್ಥೆಗೆ ಬರುವ ಮೊದಲೇ ಅವರನ್ನು ಸಮರ್ಪಣೆ ಮಾಡಲಾಗುತ್ತದೆ. ಸಾಮಾಜಿಕ ಸ್ವೀಕಾರದೊಂದಿಗೆ ಮತ್ತು ವ್ಯಾಪಕವಾದ ಗೌರವದೊಂದಿಗೆ ಆರಂಭದಲ್ಲಿ ಈ ವ್ಯವಸ್ಥೆಯು ಧಾರ್ಮಿಕ ಪಾವಿತ್ರ್ಯತೆಯನ್ನು ಹೊಂದಿತ್ತು. ಸಮಯ ಕಳೆದಂತೆ, ಜಾತಿ ವರ್ಗ ಮತ್ತು ಲಿಂಗ ಇವುಗಳು ಒಂದಾಗಿ ದಬ್ಬಾಳಿಕೆಯ ಮೂಲವಾಗಿ ಮಾರ್ಪಟ್ಟಿವೆ ಏಕೆಂದರೆ ದೇವದಾಸಿಯರು ಬಡ ದಲಿತ ಕುಟುಂಬಗಳಿಂದ ಬಂದವರಾಗಿರುತ್ತಾರೆ. ಕ್ರಮೇಣವಾಗಿ ಈ ಸಮರ್ಪಣಾ ವಿಧಾನವು ವ್ಯಾವಹಾರಿಕ ಉದ್ದೇಶವನ್ನು ಪಡೆದುಕೊಂಡಿರುತ್ತದೆ. ವಿಶೇಷವಾಗಿ ಶ್ರೀಮಂತ ಅಥವಾ ಪ್ರಬಲವಾದ ಜಾತಿಗಳ ವ್ಯಕ್ತಿಗಳು ತಮ್ಮ ವೈಯಕ್ತಿಕ ಸಂತೋಷಕ್ಕಾಗಿ ಬಾಲಕಿಯರ ಈ ಸಮರ್ಪಣೆಯನ್ನು ಮುಂದುವರೆಯಲು ಪ್ರೇರೇಪಿಸಲು ಪಾರ್ರಂಭಿಸಿರುತ್ತಾರೆ.

ದೈಹಿಕ ಸಂಬಂಧವು ಪ್ರಾರಂಭದಲ್ಲಿ ದೇವಾಲಯದ ಪೂಜಾರಿ ಮತ್ತು ದೇವದಾಸಿಗೆ ಮಾತ್ರ ಸೀಮಿತವಾಗಿತ್ತು. ಕುಟುಂಬ ಬೆಳೆದಂತೆ ಕುಟುಂಬದಲ್ಲಿ ಅನೇಕ ಸಮಸ್ಯೆಗಳು ಎದುರಾಗತೊಡಗಿದ ಕಾರಣ ಸಮಾಜದಲ್ಲಿ ಬದುಕುವ ಮತ್ತು ಬದುಕನ್ನು ಕಟ್ಟಿಕೊಳ್ಳುವ ಸಂದರ್ಭದಲ್ಲಿ ಸ್ತ್ರೀ–ಪುರುಷರೆಂಬ ಭಿನ್ನತೆಗಳು ಪ್ರಾರಂಭವಾಗಿ ಈ ಒಂದು ಮನಸ್ತಾಪಗಳು ಕಂಡು ಬರಲಿಕ್ಕೆ ಕಾರಣವಾಯಿತು. ಏಕೆಂದರೆ ಪೂಜಾರಿಗೆ ಮೊದಲು ಕುಟುಂಬ ಸಂಸಾರ ಇರುತ್ತದೆ. ಹಾಗಾಗಿ ಇಂತಹ ಕಾರ್ಯಗಳಲ್ಲಿ ತೊಡಗದೆ ಆಕೆಯೊಂದಿಗೆ ದೇಹ ಸುಖಕ್ಕಾಗಿ ಮಾತ್ರ ಆಕೆಯನ್ನು ಅನುಭವಿಸುವುದು ವಾಡಿಕೆಯಾಗಿ ಕಂಡುಬರುತ್ತದೆ. ಕಲರ್ ಜೀವನವನ್ನ ಸ್ವೀಕಾರ ಮಾಡಿದವರು ಕೇವಲ ಕಲೆಗೆ ಮೊದಲ ಪ್ರಶಸ್ತಿ ನೀಡುತ್ತಿದ್ದರು. ಆದರೆ ಅದು ಬರುಬರುತ್ತಾ ಸಂಗೀತ ನೃತ್ಯದ ಗುರುಗಳು ಅವಳನ್ನು ಅನುಭವಿಸುವುದು ಕಂಡುಬರುತ್ತದೆ. ಇದು ಒಂದು ಕ್ಷೇತ್ರದಲ್ಲಿದೆ ಅನೇಕ ಕ್ಷೇತ್ರಗಳಲ್ಲಿ ಬದಲಾವಣೆ ಕಂಡುಬರುತ್ತದೆ.

ದೇವದಾಸಿಯರು ಊರಿನ ಪ್ರಭಾವಿ ವ್ಯಕ್ತಿ ಅಥವಾ ಶ್ರೀಮಂತ ಚಾತುರ್ಯದಿಂದ ಇರುವ ವ್ಯಕ್ತಿಗಳ ಮಾತನ್ನು ಮೀರಿ ದೇವದಾಸಿಯರು ಯಾವುದೇ ಕಾರ್ಯ ಕೈಗೊಳ್ಳುವಂತಿಲ್ಲ. ದೇವದಾಸಿಯರನ್ನು ಸೂಳೆ ಎಂದು

*Please cite this article as:* ಅಂಜಿನಪ್ಪ ಗಡಾದ. (2022). ದೇವದಾಸಿಯರ ಬದುಕಿನ ಸ್ಥಿತ್ಯಂತರ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 60–64.

ಪರಿಗಣಿಸಿ ತಾವು ತಮ್ಮ ತಮ್ಮಲ್ಲಿಯೇ ಪೈಪೋಟಿ ಮಾಡಿ ಆಕೆಯನ್ನು ದೇಹ ಸುಖಕ್ಕಾಗಿ ಅನುಭವಿಸುವುದು ಕಂಡು ಬರುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ಶಿಕ್ಷಣದ ಪ್ರಭಾವದಿಂದ ಈ ಅನಿಷ್ಠ ಪದ್ಧತಿ ಇತ್ತೀಚಿನ ದಿನದಲ್ಲಿ ಕಡಿಮೆಯಾಗುತ್ತಿದೆ. ದೇವದಾಸಿ ಪದ್ಧತಿಯು ಸಮಾಜದಲ್ಲಿ ಮಾರಕವಾಗಿದ್ದು, ಈ ಅನಿಷ್ಟ ಪದ್ಧತಿ ನಿರ್ಮೂಲನೆಯಾಗಬೇಕೆಂದು ಇತ್ತೀಚಿನ ಯುವ ಪೀಳಿಗೆ ಶತಪ್ರಯತ್ನ ಮಾಡುತ್ತಿದ್ದಾರೆ. ಸರ್ಕಾರವೂ ಸಹ ಈ ಪದ್ಧತಿಯನ್ನು ನಿರ್ಮೂಲನೆ ಮಾಡಲಿಕ್ಕೆ ಅನೇಕ ಯೋಜನೆಗಳನ್ನು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಸರ್ಕಾರ ಮಾತ್ರವಲ್ಲದೆ ಹಲವಾರು ಸ್ವಯಂ ಸೇವಾ ಸಂಘಗಳು ಸಹ ದೇವದಾಸಿ ಪದ್ಧತಿ ನಿರ್ಮೂಲನ ಕಾರ್ಯದಲ್ಲಿ ತೊಡಗಿವೆ.

ಪ್ರಸ್ತುತ ದಿನಮಾನಗಳಲ್ಲಿ ದೇವದಾಸಿ ಪದ್ಧತಿಯಂತಹ ಅನಿಷ್ಟ ಪದ್ಧತಿಯಿಂದ ಹೊರ ಬಂದು ಸರ್ಕಾರದ ಸ್ವಯಂ ಸೇವಾ ಸಂಸ್ಥೆಗಳ ಸಹಕಾರ ಪಡೆದು ಸ್ವತಂತ್ರವಾಗಿ ಬದುಕುತ್ತಿದ್ದಾರೆ ಮತ್ತು ತಮ್ಮ ಮಕ್ಕಳನ್ನು ಈ ಪದ್ಧತಿಯಿಂದ ದೂರವುಳಿಯುವಂತೆ ಮಾಡುತ್ತಿದ್ದಾರೆ. ಆದರೂ ಇದು ಇನ್ನೂ ಸಂಪೂರ್ಣವಾಗಿ ನಿರ್ಮೂಲನೆಯಾಗಿಲ್ಲ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡು ಬಂದಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ 5 ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಐದು ಗ್ರಾಮಗಳ 50 ದೇವದಾಸಿಯರನ್ನು ಸಮೀಕ್ಷೆ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಅಧ್ಯಯನಕ್ಕೊಳಪಡಿಸಿರುವ ಒಟ್ಟು ಕುಟುಂಬಗಳಲ್ಲಿ ಪರಿಶಿಷ್ಟ ಜಾತಿಯ ಶೇ.40ರಷ್ಟು, ಪರಿಶಿಷ್ಟ ಪಂಗಡದ ಶೇ.48ರಷ್ಟು ಮತ್ತು ಪ್ರವರ್ಗ–Iರಲ್ಲಿ ಶೇ.12ರಷ್ಟು ದೇವದಾಸಿಯರಿರುವುದು ಕಂಡುಬಂದಿದೆ.

**ಕೋಷ್ಟಕ 1: ದೇವದಾಸಿಯರ ವಯೋಮಾನದ ವಿವರ**

| ವಯೋ ಗುಂಪು | ಜನಸಂಖ್ಯೆ | |
|---|---|---|
| | ಆವೃತ್ತಿ | ಶೇಕಡವಾರು |
| 35–45 | 08 | 16.0 |
| 46–55 | 15 | 30.0 |
| 56–65 | 27 | 54.0 |
| **ಒಟ್ಟು** | 50 | 100.0 |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ 1 ರಲ್ಲಿ ದೇವದಾಸಿಯರ ವಯೋಮಾನದ ವಿವರವನ್ನು ನೀಡಲಾಗಿದೆ. ಒಟ್ಟು ದೇವದಾಸಿಯರಲ್ಲಿ ಅತ್ಯಂತ ಹೆಚ್ಚು ಮಹಿಳೆಯರು ಶೇ.54ರಷ್ಟು 56–65 ವಯೋಮಾನದ ನಡುವೆ ಕಂಡು ಬರುತ್ತಾರೆ. ಆದರೆ 35–45 ವಯೋಮಾನದ ನಡುವೆ ಶೇ.16.0ರಷ್ಟು ವಯೋಮಾನದವರು ಕಂಡು ಬರುತ್ತಾರೆ. ಅಂದರೆ ಇತ್ತೀಚಿನ ದಿನಗಳಲ್ಲಿ ದೇವದಾಸಿಯರ ಪ್ರಮಾಣ ಕಡಿಮೆಯಾಗುತ್ತಿರುವುದನ್ನು ಮನಗಾಣಬಹುದಾಗಿದೆ.

**ಕೋಷ್ಟಕ 2: ಮಾಶಾಸನ ಪಡೆಯುತ್ತಿರುವ ದೇವದಾಸಿಯರ ವಿವರ**

| ವಿವರ | ಜನಸಂಖ್ಯೆ | |
|---|---|---|
| | ಆವೃತ್ತಿ | ಶೇಕಡವಾರು |
| ಮಾಶಾಸನ ಪಡೆಯುತ್ತಿರುವವರು | 37 | 74.0 |
| ಮಾಶಾಸನ ಪಡೆಯದಿರುವವರು | 13 | 26.0 |
| ಒಟ್ಟು | 50 | 100.0 |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ 2 ರಲ್ಲಿ ಮಾಶಾಸನ ಪಡೆಯುತ್ತಿರುವ ದೇವದಾಸಿಯರ ಪ್ರಮಾಣವನ್ನು ನೀಡಲಾಗಿದೆ. ಒಟ್ಟು ದೇವದಾಸಿಯರಲ್ಲಿ ಶೇ. 74 ರಷ್ಟು ಮಂದಿ ಮಾಶಾಸನ ಪಡೆಯುತ್ತಿದ್ದು, ದಾಖಲಾತಿಯ ಕೊರತೆಯಿಂದ ಶೇ.26 ರಷ್ಟು ದೇವದಾಸಿಯರಿಗೆ ಯಾವುದೇ ರೀತಿಯ ಮಾಶಾಸನ ದೊರೆಯದಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದಿರುವ ದೇವದಾಸಿಯರು ತಮ್ಮ ಯಜಮಾನನ ಕೃಷಿ ಭೂಮಿಯನ್ನು ಅವಲಂಬಿಸಿಕೊಂಡು ಜೀವನ ನಡೆಸಿಕೊಂಡು ಹೋಗುತ್ತಿರುವುದು ಕಂಡು ಬರುತ್ತದೆ.

**ಕೋಷ್ಟಕ 3: ದೇವದಾಸಿಯರ ಕುಟುಂಬದ ಜನಸಂಖ್ಯಾ ವಿವರ**

| ವಿವರ | ಕುಟುಂಬಗಳು | ಜನಸಂಖ್ಯೆ | | |
|---|---|---|---|---|
| | | ಗಂಡು | ಹೆಣ್ಣು | ಒಟ್ಟು |
| ಮರಿಯಮ್ಮನಹಳ್ಳಿ | 10 | 20 | 32 | 52 |
| ರಾಮನಗರ | 10 | 14 | 18 | 32 |
| ಚಿಲುಗೋಡು | 10 | 11 | 23 | 34 |
| ಬನ್ನಿಗೋಳ | 10 | 19 | 31 | 50 |
| ಹಂಪಾ ಪಟ್ಟಣ | 10 | 18 | 20 | 38 |
| ಒಟ್ಟು | 50 | 82 | 124 | 206 |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ 3ರಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ದೇವದಾಸಿಯರ ಕುಟುಂಬದಲ್ಲಿರುವ ಜನಸಂಖ್ಯೆ ವಿವರವನ್ನು ನೀಡಲಾಗಿದೆ. ಕೋಷ್ಟಕ ಪ್ರಕಾರ ಪುರುಷರಿಗಿಂತ ಮಹಿಳೆಯರ ಪ್ರಮಾಣ

ಅಧಿಕವಾಗಿರುವುದನ್ನು ಕಾಣಬಹುದಾಗಿದೆ. ಅಧ್ಯಯನಕ್ಕೆ ಒಳಪಡಿಸಿರುವ ಎಲ್ಲಾ ಗ್ರಾಮಗಳಲ್ಲೂ ಕೂಡ ಮಹಿಳೆಯರ ಪ್ರಮಾಣವೇ ಅಧಿಕವಾಗಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಗಂಡು ಮಕ್ಕಳು ಮದುವೆಯ ನಂತರ ತಾಯಿಯನ್ನು ನೋಡಿಕೊಳ್ಳದೆ ಬೇರೆ ಮನೆಯಲ್ಲಿ ಜೀವನ ನಡೆಸಿಕೊಂಡು ಹೋಗುತ್ತಾರೆ. ಕೆಲವು ಹೆಣ್ಣುಮಕ್ಕಳು ಮದುವೆಯಾಗಿ ಹೋದರೆ, ಇನ್ನು ಕೆಲವು ಹೆಣ್ಣುಮಕ್ಕಳು ಮದುವೆಯಾಗದೆ ಮತ್ತೆ ಇದೇ ಸಂಪ್ರದಾಯಕ್ಕೆ ಗುರಿಯಾಗುತ್ತಿದ್ದಾರೆ. ಕೇಳಿದರೆ ಕುಟುಂಬ ಬೆಳೆಯಬೇಕು ಎನ್ನುವ ಆಶಯದಿಂದ ಕುಟುಂಬವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಒತ್ತವರು ಈ ಪದ್ಧತಿಯಲ್ಲಿಯೇ ಮುಂದುವರಿಯುತ್ತಿರುವುದರಿಂದ ಇದು ಇನ್ನೂ ಜೀವಂತವಾಗಿದೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ.

**ಕೋಷ್ಟಕ 4: ದೇವದಾಸಿಯರ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳ ವಿವರ**

| ಶೈಕ್ಷಣಿಕ ಮಟ್ಟ | ಆವೃತ್ತಿ | ಶೇಕಡವಾರು |
|---|---|---|
| ಪ್ರಾಥಮಿಕ ಶಿಕ್ಷಣ | 1 | 1.6 |
| ಮಾಧ್ಯಮಿಕ ಶಿಕ್ಷಣ | 4 | 6.6 |
| ಪ್ರೌಢ ಶಿಕ್ಷಣ | 25 | 41.6 |
| ಡಿಪ್ಲೋಮೋ ಶಿಕ್ಷಣ | 2 | 3.3 |
| ಪದವಿಪೂರ್ವ ಶಿಕ್ಷಣ | 17 | 28.0 |
| ಪದವಿ ಶಿಕ್ಷಣ | 5 | 8.3 |
| ಸ್ನಾತಕೋತ್ತರ | 1 | 1.6 |
| ಇತರೆ | 5 | 8.3 |
| ಒಟ್ಟು | 60 | 100.0 |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ 4 ರಲ್ಲಿ ದೇವದಾಸಿಯರ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಯನ್ನು ನೀಡಲಾಗಿದೆ. ಒಟ್ಟು ಜನಸಂಖ್ಯೆಯಲ್ಲಿ 60 ಮಕ್ಕಳು ವಿವಿಧ ಹಂತದಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅತಿ ಹೆಚ್ಚಿನ ಮಕ್ಕಳು ಪ್ರೌಢ ಶಿಕ್ಷಣ ಪಡೆಯುತ್ತಿರುವುದನ್ನು ಕಾಣಬಹುದಾಗಿದ್ದು, ಶೇ. 28 ರಷ್ಟು ಮಕ್ಕಳು ಪದವಿ ಪೂರ್ವ ಶಿಕ್ಷಣವನ್ನು ಪಡೆಯುತ್ತಿರುವುದು ಕಂಡು ಬಂದಿದೆ. ರಾಷ್ಟ್ರೀಯ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂಬ ನಿಯಮದಿಂದ ಇತ್ತೀಚಿನ ದಿನಗಳಲ್ಲಿ ಇವರಿಗೂ ಶಿಕ್ಷಣ ದೊರೆಯುತ್ತಿದೆ. ಶಿಕ್ಷಣ ಪಡೆದ ಯುವಕರು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಈ ಅನಿಷ್ಟ ಪದ್ಧತಿಯನ್ನು ತಡೆಗಟ್ಟುವಲ್ಲಿ ಅರಿವು ಮೂಡಿಸುವುದರ ಜೊತೆಗೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗುತ್ತಿದ್ದಾರೆ.

ಶಿಕ್ಷಣ ಪಡೆದವರು ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡರೆ ಅವಿದ್ಯಾವಂತರ ಕೃಷಿ ಮತ್ತು ಕೂಲಿಯನ್ನು ಅವಲಂಬಿಸಿಕೊಂಡು ಜೀವನವನ್ನ ರೂಪಿಸಿಕೊಳ್ಳುತ್ತಿದ್ದಾರೆ. ಕೃಷಿಯನ್ನು ಅವಲಂಬಿಸಿ ಕೊಂಡಿರುವವರ ಪ್ರಮಾಣ ಶೇ. 2ರಷ್ಟಿದ್ದರೆ ಕೂಲಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಶೇ.86 ರಷ್ಟಿದೆ. ಇನ್ನುಳಿದವರು ವ್ಯಾಪಾರ ಮತ್ತು ಇತರ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ.

**ದೇವದಾಸಿಯರ ಬೆಲೆ ಮತ್ತು ಬೇಡಿಕೆ**

ಇತ್ತೀಚಿನ ದಿನಗಳಲ್ಲಿ ದೇವದಾಸಿಯರ ಪ್ರಮಾಣ ಕಡಿಮೆಯಾಗುತ್ತಿದ್ದರೂ ಕೂಡ ಇಂದಿಗೂ ಈ ಪದ್ಧತಿ ಸಂಪೂರ್ಣ ನಶಿಸಿಲ್ಲ. ಹಾಗಾಗಿ ಯೌವ್ವನದಲ್ಲಿರುವ ದೇವದಾಸಿಯರ ಕುಟುಂಬ ಆರ್ಥಿಕವಾಗಿ ಸಬಲರಾಗಿದ್ದರೆ, ವಯಸ್ಸಾದ ದೇವದಾಸಿಯರಿಗೆ ಬೇಡಿಕೆ ಕಡಿಮೆಯಿರುವುದ್ದರಿಂದ ಅವರ ಕುಟುಂಬವು ಆರ್ಥಿಕವಾಗಿ ಸಂಕಷ್ಟದಲ್ಲಿರುತ್ತದೆ. ದೇವದಾಸಿಯರು ಕೊನೆಯ ದಿನಗಳಲ್ಲಿ ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದೆ, ಮಕ್ಕಳ ಆಶ್ರಯವೂ ಇಲ್ಲದೆ, ಯಾವುದೋ ಗುಡಿಯಲ್ಲಿ ಅಥವಾ ಯಾರದೋ ಆಶ್ರಯದಲ್ಲಿ ಜೀವನದ ಕೊನೆಯ ದಿನಗಳನ್ನು ಕಳೆಯುತ್ತಾರೆ. ಅದಕ್ಕಾಗಿ ಪ್ರಸ್ತುತ ದಿನಮಾನಗಳಲ್ಲಿ ತಿಂಗಳ ಮಾಶಾಸನ 1500ರೂ ಬರುತ್ತದೆ. ಅದು ಜೀವನ ನಿರ್ವಹಣೆಗೆ ಸಾಕಾಗುತ್ತಿಲ್ಲ. ಆ ದೃಷ್ಟಿಯಿಂದ ಘನ ಸರ್ಕಾರವು ದೇವದಾಸಿಯರಿಗೆ ತಿಂಗಳಿಗೆ 5000 ರೂಗಳನ್ನು ಮತ್ತು 5 ಎಕರೆ ಕೃಷಿ ಭೂಮಿಯನ್ನು ನೀಡಬೇಕೆಂದು ತಮ್ಮ ಒಡಲಾಳದ ನೋವಿನಿಂದ ನುಡಿಯುತ್ತಿದ್ದಾರೆ.

**ದೇವದಾಸಿಯರ ಹೊಸಬಗೆಯ ಶೋಷಣೆ**

ವೇದ ಉಪನಿಷತ್ ಶಾಸ್ತ್ರಗಳ ಕಾಲದಿಂದ ಇಲ್ಲಿಯ ತನಕ ಹೆಣ್ಣು ಮಾನವತೆಯಿಂದ ಹೋರಾಟ ನಡೆಸುತ್ತಿದ್ದರೂ ಓದು ಕಲಿತ ಅಧಿಕಾರಿಗಳು, ಬಂಡವಾಳಶಾಹಿಗಳು, ರಾಜಕೀಯ ವ್ಯಕ್ತಿಗಳು ಬೇರೆ–ಬೇರೆ ಬಗೆಯಲ್ಲಿ ಅವರನ್ನು ಶೋಷಣೆ ಮಾಡುತ್ತಿರುವುದನ್ನು ಕಾಣುತ್ತೇವೆ. ಸಮಾಜದಲ್ಲಿ ದೇವದಾಸಿಯರನ್ನು ಹಿಂದೆ ದೇವರ ಹೆಸರಿನಲ್ಲಿ ಶೋಷಿಸುತ್ತಿದ್ದರೆ, ಈಗ ರಾಜಕೀಯದ ಹೆಸರಿನಲ್ಲಿ ಅಥವಾ ವ್ಯಾಪಾರದ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ದೇವದಾಸಿಯರಿಗೆ ವಿವಿಧ ರೀತಿಯ ಆಮಿಷಗಳನ್ನು ಒಡ್ಡಿ ಅವರನ್ನು ಬಳಸಿಕೊಳ್ಳುವುದಕ್ಕೆ ಕೆಲವು ಉದಾಹರಣೆಗಳನ್ನು ಈ ಕೆಳಗಿನಂತೆ ಕಾಣಬಹುದು.

- ಕೆಲಸ ಕೊಡಿಸುವುದಾಗಿ ಹೇಳುವುದು.
- ನಿನ್ನ ಮಕ್ಕಳ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಗೆ ಮಹತ್ವ ನೀಡುತ್ತೇನೆಂದು ಹೇಳುವುದು.

- ಸರ್ಕಾರದ ಯೋಜನೆಗಳಲ್ಲಿ ನಿನಗೆ ಭೂಮಿ ಮತ್ತು ವಸತಿಗಳನ್ನು ಕೊಡಿಸುವುದು ಹಾಗೂ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು.
- ಗ್ರಾಮ ಪಂಚಾಯಿತಿ ರಾಜಕೀಯದಲ್ಲಿ ಭಾಗವಹಿಸುವ ಅವಕಾಶವನ್ನು ಒದಗಿಸಿಕೊಡುತ್ತೇನೆಂದು ಹೇಳುವುದ
- ನಿಮ್ಮ ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ನಾನೇ ಹೊತ್ತುಕೊಂಡು ನಿರ್ವಹಿಸುತ್ತೇನೆ ಎಂದು ಹೇಳುವುದು. ಹೀಗೆ ವಿವಿಧ ರೀತಿಯಲ್ಲಿ ಆಮಿಷವೊಡ್ಡಿ ದೇವದಾಸಿಯರನ್ನು ಶೋಷಣೆ ಮಾಡಲಾಗುತ್ತಿದೆ.

**ದೇವದಾಸಿಯರು ಎದುರಿಸುತ್ತಿರುವ ಇತರೆ ಸಮಸ್ಯೆಗಳು**

ದೇವದಾಸಿ ಸಂಪ್ರದಾಯ ಸಂಪೂರ್ಣವಾಗಿ ನಿರ್ಮೂಲನೆಗಾಗಿ ಜಾಗೃತಿ ಮೂಡಿಸಿ ಅವರಿಗೆ ಉದ್ಯೋಗ ಭದ್ರತೆಯ ಭರವಸೆಯನ್ನು ಕಲ್ಪಿಸಿ ಆರ್ಥಿಕ ಯೋಜನೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತಹ ಮನೋಸ್ಥೈರ್ಯ ಸರ್ಕಾರ ಮತ್ತು ಸಮಾಜ ತಿಳಿಸಬೇಕು.

ಲೈಂಗಿಕ ಶಿಕ್ಷಣವನ್ನು ಯುವಪೀಳಿಗೆಗೆ ನೀಡಿ ಲಿಂಗಭೇದಕ್ಕೆ ಅವಕಾಶವಿಲ್ಲದಂತಹ ಪರಿಸರ ನಿರ್ಮಿಸಬೇಕು. ದೃಷ್ಟಿ ಆಚರಣೆಗಳ ನಿರ್ಮೂಲನೆಗಾಗಿ ಪ್ರಚಾರ ಪ್ರಸಾರ ಕೈಗೊಂಡು ಸಂಪೂರ್ಣವಾಗಿ ನಿರ್ಮೂಲನೆಯಾಗಬೇಕು. ಜೊತೆಗೆ ಅವರ ಮಕ್ಕಳಿಗೆ ಶಿಕ್ಷಣ ಕಲ್ಪಿಸುವುದು ಅತ್ಯಂತ ಅವಶ್ಯಕವಾದ ಅಂಶವಾಗಿದೆ. ಈ ಸಂಬಂಧ ಸರ್ಕಾರ ರಾಜಕಾರಣಿಗಳು ಪೊಲೀಸ್ ಇಲಾಖೆ ನ್ಯಾಯಾಲಯ ವ್ಯವಸ್ಥೆ ಯಾವುದೇ ಕಾನೂನಿನ ಯಶಸ್ವಿ ಅದರ ಅನುಷ್ಠಾನದಲ್ಲಿ ಅಡಗಿದೆ ಎಂಬುದನ್ನು ಅರಿತು ಪ್ರಾಮಾಣಿಕ ಪ್ರಯತ್ನದ ಮೂಲಕ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಈ ಕುರಿತು ವಿಶಿಷ್ಟ ಕಾಯ್ದೆ ರೂಪಿಸಲು ಕ್ರಮ ಕೈಗೊಂಡಾಗ ದೇವದಾಸಿ ಪದ್ಧತಿ ಈ ಸಮಾಜದಿಂದ ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದನ್ನು ನಿರೀಕ್ಷಿಸಬಹುದಾಗಿದೆ. ಕರ್ನಾಟಕ ರಾಜ್ಯದಲ್ಲಿ ಐವತ್ತರಷ್ಟು ಪರಿಶಿಷ್ಟ ಬುಡಕಟ್ಟುಗಳಿಂದ ಅತಿ ಹೆಚ್ಚು ಬುಡಕಟ್ಟು ಜನಸಂಖ್ಯೆ ಹೊಂದಿದ ಬಳ್ಳಾರಿ ಜಿಲ್ಲೆಯ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಇಲ್ಲಿನ ಬಿಟ್ಟುಬಿಡು ಕಟ್ಟೆಗಳ ಸಂಖ್ಯೆಯಲ್ಲಿ ಶೇಕಡ 97ರಷ್ಟು ವಾಲ್ಮೀಕಿ ಬೇಡ ಅಥವಾ ನಾಯಕ ಜನಾಂಗಕ್ಕೆ ಸೇರಿದವರಾಗಿದ್ದು ಹಗರಿಬೊಮ್ಮನಹಳ್ಳಿಯಲ್ಲಿ ಅತಿಹೆಚ್ಚು ಎರಡನೆಯ ಸ್ಥಾನದಲ್ಲಿ ದೇವದಾಸಿಯರು ಕಂಡುಬರುತ್ತಾರೆ. ಇದಕ್ಕೆ ಕಾರಣ ಒಲವಿದ್ದರೂ ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಪ್ರಭಾವವು ಒಂದಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಕಂಡುಬರುವುದು ಕೂಡ್ಲಿಗಿ ತಾಲೂಕಿನಲ್ಲಿ. ಏಕೆಂದರೆ ಆ ಕಾಲದ ಸೈನಿಕರು ತಂಗುದಾಣವಾಗಿದ್ದ ಪರಿಣಾಮ ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ದೇವದಾಸಿಯರು ಕಂಡುಬರುತ್ತಾರೆ. ಇಂದಿಗೂ ಇಲ್ಲಿ ಯಾಕೆ ಬೇಡ ಸಮುದಾಯದ ಕುಟುಂಬಗಳು ದೇವದಾಸಿ ಸಂಪ್ರದಾಯವನ್ನು ಮುಂದುವರಿಸಿಕೊಂಡು ನಿರಂತರ ಆದಾಯ ಬರುವಂತಹ ತರಮೂಲಗಳಿಲ್ಲದ ಕಾರಣ ಅನಿವಾರ್ಯವಾಗಿ ಈ ಊರಿನ ಶ್ರೀಮಂತನ ಜೊತೆಯಲ್ಲಿ ತನ್ನ ದೇಹ ಸಂಬಂಧವನ್ನು ಬೆಳೆಸಿಕೊಂಡು ಜೀವನ ನಡೆಸುತ್ತಿದ್ದಾರೆ. ಇದು ನಮ್ಮ ಕುಲ ಪದ್ಧತಿ ಪರಂಪರಾಗತವಾಗಿ ಬಂದಿದ್ದು ನೈತಿಕವಾದದ್ದು ಎಂಬ ಬ್ರಮಾಲೋಕದಲ್ಲಿ ಇದ್ದು ಕುಟುಂಬದ ಆರ್ಥಿಕ ವ್ಯವಸ್ಥೆಯ ಒಂದು ಭಾಗವಾಗಿ ಆದಾಯದ ಮೂಲವಾಗಿ ಬಳಸಿಕೊಂಡಿದ್ದಾರೆ.

ಈ ಸಮುದಾಯದಲ್ಲಿ ದೇವದಾಸಿಯರಿದ್ದು ಇವರು ಕಲಾವಿದರಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ಮರಿಯಮ್ಮನಹಳ್ಳಿಯ ಬೇಡ ಮಹಿಳೆಯರು. ಮರಿಯಮ್ಮನಹಳ್ಳಿ ರಾಜ್ಯದಲ್ಲಿ ಹೆಸರು ಮಾಡಿ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಉದಾಹರಣೆಗೆ ವಾಲ್ಮೀಕಿ ಪ್ರಶಸ್ತಿ. ಕನ್ನಡ ವಿಶ್ವವಿದ್ಯಾಲಯ ನೀಡಲಿರುವ ನಾಡೋಜ ಪ್ರಶಸ್ತಿಯು ಕಲಾವಿದರಾದ ನಾಗರತ್ನಮ್ಮನವರಿಗೆ ಲಭಿಸಿದೆ. ಇನ್ನು ಕೆಲವರು ಪ್ರತಿಭೆ ಇದ್ದರೂ ಸಾಮಾಜಿಕ ಅವಕಾಶಗಳಿಂದ ವಂಚಿತರಾಗಿ ಆರ್ಥಿಕವಾಗಿ ಯಾವುದೇ ಸೌಲಭ್ಯ ಪಡೆಯದೆ ಜೀವನ ನಿರ್ವಹಣೆಗಾಗಿ ಅಲೆಯುತ್ತಿದ್ದಾರೆ. ಇನ್ನು ಕೆಲವರು ಆಧುನಿಕ ಕಾಲದ ಆಗುಹೋಗುಗಳಿಗೆ ಸ್ಪಂದಿಸುವ ಮನಸ್ಥೈರ್ಯವಿಲ್ಲದೆ ಆತಂಕಕ್ಕೊಳಗಾಗಿದ್ದಾರೆ. ಇಂತಹ ಕಲಾವಿದರಿಗೆ ಸಹೃದಯದವರು ಸರ್ಕಾರ ಮತ್ತು ಸಮಾಜ ಪೂರ್ವ ಯೋಜನೆಗಳು ಮೀರಿ ಪ್ರೋತ್ಸಾಹಿಸಬೇಕಾದ ಅಗತ್ಯತೆ ಇದೆ.

ಹಾಗೆಯೇ ದೇವದಾಸಿಯರ ಸಾಮಾಜಿಕ-ಆರ್ಥಿಕ ಶಿಕ್ಷಣ ರಾಜಕೀಯ ಸ್ಥಿತಿಗಳಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿದ್ದು, ಇಲ್ಲಿನ ಬಹುಸಂಖ್ಯಾತರ ಜೀವನೋಪಾಯಕ್ಕಾಗಿ ನಿರಂತರ ಆದಾಯ ಬರುವ ಆರ್ಥಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ಬಡತನದ ರೇಖೆಯಿಂದ ಅವರನ್ನು ಮೇಲೆತ್ತಲು ಪ್ರಯತ್ನಿಸಬೇಕಾಗಿದೆ. ದೇವದಾಸಿಯರ ಸಂಪ್ರದಾಯ ನಿರ್ವಹಣೆಗಾಗಿ ಪ್ರಾಚೀನ ಕಾಲದಿಂದ ಹಿಡಿದು ಇಲ್ಲಿಯವರೆಗೂ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡರು. ಇದು ಇನ್ನೂ ಜೀವಂತವಾಗಿದ್ದು, ಹಲವಾರು ಕಾರಣಗಳಿಂದಾಗಿ ಉಳಿದು ಬೆಳೆಯುತ್ತದೆ. ಆಧುನಿಕ ಸಮಾಜದಲ್ಲಿ ದೇವದಾಸಿಯರು ತಾತ್ಕಾಲಿಕ ಆದಾಯವನ್ನು ಇಟ್ಟುಕೊಂಡು ಜೀವನ ನಡೆಸಿದರೆ ಯಾವುದೇ ಅಭಿವೃದ್ಧಿಯಾಗದ ಅಂತಹ ಪರಿಸ್ಥಿತಿಯನ್ನು

ಎದುರಿಸಬೇಕಾಗುತ್ತದೆ. ಈ ಪರಿಣಾಮ ನಾನಾ ರೀತಿಯ ದುಷ್ಪರಿಣಾಮಗಳನ್ನು ದೇವದಾಸಿಯರು ಎದುರಿಸುವುದು ಸಾಮಾನ್ಯವಾಗಿದೆ.

**ಸಮಾರೋಪ**

ಒಟ್ಟಾರೆಯಾಗಿ ಹೇಳುವುದಾದರೆ ದೇವರು ಧರ್ಮದ ಹೆಸರಿನಲ್ಲ ತಳವರ್ಗದ ಮಹಿಳೆಯರನ್ನು ಹಿಂದಿನ ಕಾಲದಿಂದಲೂ ಲೈಂಗಿಕವಾಗಿ ಶೋಷಣೆ ಮಾಡುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಸಮಾಜ ಬದಲಾದಂತೆ ಈ ಪದ್ಧತಿ ಅಮಾನುಷವಾದುದು ಎಂದು ಅರಿವಾಗ ತೊಡಗಿದಾಗ ಈ ಪದ್ಧತಿಯ ವಿರುದ್ಧದ ಕೂಗು ಹೆಚ್ಚಿ, ಸರ್ಕಾರವು ಕೂಡ ಈ ಪದ್ಧತಿಯನ್ನು ನಿಷೇಧ ಮಾಡಿದೆ. ಈ ಹಿನ್ನಲೆಯಲ್ಲಿ ದೇವದಾಸಿಯರ ಪುನರ್ವಸತಿಗೆ ಸರ್ಕಾರ ವಿವಧ ಯೋಜನೆಗಳನ್ನು ರೂಪಿಸಿ ಮಾಶಾಸವನ್ನೂ ನೀಡುತ್ತಿರುವುದು ಅವರ ಜೀವನ ಸುಧಾರಣೆಗೆ ಅನುಕೂಲವಾಗಿದೆ.

**ಪರಾಮರ್ಶನ ಗ್ರಂಥಗಳು**


- ಜೋಗನ್ ಶಂಕರ್. (1993). *ದೇವದಾಸಿ ಸಂಪ್ರದಾಯ.* ವಿಮೋಚನ ಪ್ರಕಾಶನ.
- ಕೊತ್ಲಮ್ಮ. (2007). *ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ.* (ಅಪ್ರಕಟಿತ ಪ್ರೌಢ ಪ್ರಬಂಧ) ಬುಡಕಟ್ಟು ಅಧ್ಯಯನ ವಿಭಾಗ. ಕನ್ನಡ ವಿಶ್ವವಿದ್ಯಾಲಯ.
- ಲೀಲಾ ಸಂಪಿಗೆಯವರ. (2004). *ಜಾನಪದ ಮತ್ತು ಆಧುನಿಕ ಬುಡಕಟ್ಟು ಸಮುದಾಯಗಳಲ್ಲಿ ವೇಶ್ಯಾವಾಟಿಕೆ ಪರಂಪರೆ ಮತ್ತು ಸಮಸ್ಯೆಗಳು.* (ಅಪ್ರಕಟಿತ ಪ್ರೌಢ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ.
- ಪ್ರಸನ್ನ ಕುಮರ್. (2014). *ಬದಲಾವಣೆಯ ಹಾದಿಯಲ್ಲಿ ದೇವದಾಸಿಯರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ : ಬೆಳಗಾವಿ ಜಿಲ್ಲೆ ಅನುಲಕ್ಷಿಸಿ.* (ಅಪ್ರಕಟಿತ ಪ್ರೌಢ ಪ್ರಬಂಧ)ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಶೈಲಜ ಹಿರೇಮಠ. (1999). *ಸ್ತ್ರೀ ಕಥನ.* ಭುವನ ಪ್ರಕಾಶನ.
- ವೆಂಕಟಗಿರಿ ದಳವಾಯಿ. (1999). *ಕನ್ನಡ ರಂಗಭೂಮಿ ಮತ್ತು ಮಹಿಳೆ.* (ಅಪ್ರಕಟಿತ ಪ್ರೌಢಪ್ರಬಂಧ), ಗುಲ್ಬರ್ಗಾ ವಿಶ್ವವಿದ್ಯಾಲಯ.